15.	ಚಿತ್ರದುರ್ಗ	228	02	230
16.	ಹಾಸನ	153	09	162
17.	ಕೋಲಾರ	192	-	192
18.	ಮಂಡ್ಯ	144	01	145
19.	ತುಮಕೂರು	090	05	095
	ಒಟ್ಟು	**6863**	**202**	**7065**

ಆ) ಹೌದು.

ಹೊಸ ಜೈಲುಗಳನ್ನು ನಿರ್ಮಿಸುವ ಕುರಿತು ಸರ್ಕಾರ ಈ ರೀತಿ ಯೋಜನೆಗಳನ್ನು ಹಾಕಿಕೊಂಡಿದೆ:

1) ಶಿಥಿಲವಾದಂತಹ ಹಾಗೂ ಹೆಚ್ಚು ದಟ್ಟಣೆಯಿರುವ ಜೈಲುಗಳ ಬದಲಿಗೆ ಹೊಸ ಮಾದರಿಯ ಹೆಚ್ಚು ಸ್ಥಳಾವಕಾಶವಿರುವ ಜೈಲುಗಳನ್ನು ಕಟ್ಟುವುದು.

2) ಶಿಥಿಲವಾದಂತಹ ಉಪ ಕಾರಾಗೃಹಗಳ ಬದಲಿಗೆ ಹೊಸ ಕಟ್ಟಡಗಳನ್ನು ಕಟ್ಟುವುದು, ಹಾಗೂ

3) ಎಲ್ಲೆಲ್ಲಿ ಮುನ್ಸಿಫ್ ನ್ಯಾಯಾಲಯಗಳಿದ್ದು, ಕಾರಾಗೃಹಗಳು ಇಲ್ಲವೋ ಅಂತಹ ಸ್ಥಳಗಳಲ್ಲಿ ಜೈಲುಗಳನ್ನು ನಿರ್ಮಿಸುವುದು.

ಈ ಯೋಜನೆಯನ್ವಯ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಕೇಂದ್ರ ಕಾರಾಗೃಹವನ್ನು ನಿರ್ಮಿಸಲಾಗುತ್ತಿದೆ ಹಾಗೂ ಈ ಕೆಳಕಂಡ ಸ್ಥಳಗಳಲ್ಲಿ ಶಿಥಿಲಗೊಂಡ ಹಳೆಯ ಉಪ ಕಾರಾಗೃಹಗಳು ಬದಲಿಗೆ ಹೊಸ ಉಪ ಕಾರಾಗೃಹಗಳನ್ನು ಕಟ್ಟಲಾಗುತ್ತಿದೆ.

1. ಚಿಕ್ಕಮಗಳೂರಿನಲ್ಲಿ ಜಿಲ್ಲಾ ಉಪ ಕಾರಾಗೃಹ. 2. ಬಳ್ಳಾರಿ ಜಿಲ್ಲೆಯ ಹಡಗಲಿಯಲ್ಲಿ ಉಪ ಕಾರಾಗೃಹ. 3. ಮೈಸೂರು ಜಿಲ್ಲೆಯ ನಂಜಗೂಡಿನಲ್ಲಿ ಉಪ ಕಾರಾಗೃಹ. 4. ಗುಲ್ಬರ್ಗಾ ಜಿಲ್ಲೆ ಆಳಂದದಲ್ಲಿ ಉಪ ಕಾರಾಗೃಹ.

ರಾಜ್ಯದ 42 ತಾಲ್ಲೂಕುಗಳಲ್ಲಿ ಮುನ್ಸಿಫ್ ನ್ಯಾಯಾಲಯಗಳಿದ್ದು, ಅಲ್ಲಿ ಕಾರಾಗೃಹಗಳ ವ್ಯವಸ್ಥೆ ಇಲ್ಲ. ಈ ತಾಲ್ಲೂಕುಗಳಲ್ಲಿ ಹಣಕಾಸಿನ ಲಭ್ಯತೆ ಹಾಗೂ ನಿಮೇಶನ ಲಭ್ಯತೆ ಇವುಗಳನ್ನು ಅನುಸರಿಸಿ ಕಾರಾಗೃಹಗಳನ್ನು ಕ್ರಮೇಣ ನಿರ್ಮಿಸಲಾಗುವುದು.

ಕುಂದಾಪುರ ತಾಲ್ಲೂಕಿನಲ್ಲಿ ಸಮುದ್ರ ಕೊರತೆ

699 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಸಮುದ್ರ ಕೊರತ ಮತ್ತು ನದಿ ಕೊರತ ನಿರಂತರವಾಗಿ ನಡೆಯುತ್ತಿರುವುದರಿಂದ ರೈತರ ಬೆಳೆಗೆ ಹಾನಿಯಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಕುಂದಾಪುರ ತಾಲ್ಲೂಕಿನ ಸಮುದ್ರ ಕೊರತ ತಡೆಗಟ್ಟಲು ತೆಗೆದುಕೊಂಡ ಕ್ರಮವೇನು;

ಇ) ಕುಂದಾಪುರ ತಾಲ್ಲೂಕಿನಲ್ಲಿ ಎಲ್ಲಿ ಎಲ್ಲಿ ಸಮುದ್ರ ಕೊರತ ಸಂಭವಿಸಿದೆ ಮತ್ತು ಕೈಗೊಂಡಿರುವ ಕ್ರಮಗಳೇನು;

ಈ) ಕುಂದಾಪುರ ತಾಲ್ಲೂಕಿನಲ್ಲಿ ಎಲ್ಲಿ ಎಲ್ಲಿ ನದಿಕೊರತ ಸಂಭವಿಸಿದೆ ಮತ್ತು ಕೈಗೊಂಡಿರುವ ಕ್ರಮವೇನು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿ) :

ಅ) ಬಂದಿದೆ.

ಆ) ಸಮುದ್ರ ಕೊರತ ತಡೆಗಟ್ಟಲು ಪ್ರತಿಬಂಧಕ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಇ) ಕುಂದಾಪುರ ತಾಲ್ಲೂಕಿನ ಕಸಬಾ ಕೋಡಿ, ಗುಜ್ಜಾಡಿ, ಕೋಟೆಬಾಗಿಲು, ಅಳಿವೆ ಗದ್ದೆ, ಅಮ್ಮನವರ ಕೊಪ್ಪಲು, ತಾರಾಪತಿ, ಕಿರು ಮಂಜೇಶ್ವರ, ಕೋರಾಡಿ, ಜೀಜಾಡಿ, ಗೋಪಾಡಿ, ಉಪ್ಪುಂದ, ಗಂಗೇಬೈಲು, ಕರ್ಕಿಕಳಿ ಎಂಬ ಸ್ಥಳಗಳಲ್ಲಿ ಸಮುದ್ರ ಕೊರತ ಉಂಟಾಗಿದೆ ಹಾಗೂ ಈ ಕಡೆಗಳಲ್ಲಿ ಸಮುದ್ರ ಕೊರತ ತಡೆಗಟ್ಟಲು ತುರ್ತು ಪ್ರತಿಬಂಧಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಈ) ಕುಂದಾಪುರ ತಾಲ್ಲೂಕಿನ ಕೊಡೇರಿ ಪಡುವರಿ ಹೇರಿಕುದ್ರು, ಹಳ್ನಾಡು, ಮೇಲಕಾರ್ವಿಕೇರಿ, ಕೆಳಕಾರ್ವಿಕೇರಿ, ಕೋಟೆಲಿಂಗೇಶ್ವರ ದೇವಸ್ಥಾನದ ಹತ್ತಿರ, ಮಾರಸ್ವಾಮಿ ದೇವಸ್ಥಾನದ ಹತ್ತಿರ ನದಿ ಕೊರತ ಸಂಭವಿಸಿದೆ. ಈ ಸ್ಥಳಗಳಲ್ಲಿ ಪ್ರತಿಬಂಧಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಕುಂದಾಪುರ ತಾಲ್ಲೂಕಿನ ಶಂಕರನಾರಾಯಣ ಠಾಣೆಯಲ್ಲಿ ದಾಖಲಾದ ದೂರು

700 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕು ಶಂಕರ ನಾರಾಯಣ ಠಾಣೆಯಲ್ಲಿ ಕಳೆದ ಒಂದು ವರ್ಷದಿಂದ ಬಂದ ದೂರುಗಳೆಷ್ಟು ?

ಆ) ಎಷ್ಟಕ್ಕೆ ತನಿಖೆ ನಡೆಸಿ ಪಿಂಬರಹ ಕೊಡಲಾಗಿದೆ.

ಇ) ಎಷ್ಟು ಪ್ರಕರಣಗಳಿಗೆ ಕೇಸು ದಾಖಲು ಮಾಡಲಾಗಿದೆ.

ಈ) ದೋಷಾರೋಪಣ ಪಟ್ಟಿ ಸಲ್ಲಿಸಿದ ಪ್ರಕರಣಗಳೆಷ್ಟು ?